**ಜನವರಿ,** 2020

## ಮೇಷ



ಖರ್ಚು-ವೆಚ್ಚ ಹಿಡಿತದಲ್ಲಿ ಇರಲಿ. ಹಿರಿಯರನ್ನು ಗೌರವಿಸಿ. ಅನುಭವಕ್ಕೆ ದಕ್ಕದ್ದನ್ನು ಒದಗಿಸಿಕೊಳ್ಳುವ ಬಯಕೆ, ಅದನ್ನು ನನಸಾಗಿಸಿಕೊಳ್ಳುವ ಅವಿರತ ಪ್ರಯತ್ನ ಮುಂದುವರೆಯಲಿದೆ. ದೇಹಾರೋಗ್ಯದ ಬಗ್ಗೆ ಗಮನಹರಿಸಿ.

ಶುಭ : 13, 23, 6

ಅಶುಭ: 4, 7, 24

## ವೃಷಭ



ಧನಾಗಮನದಿಂದ ಬಾಳಿನಲ್ಲಿ ಹೊಸ ದಿಸೆ. ಅನಗತ್ಯ ಆತಂಕ, ಚಿಂತೆ ಬೇಡ. ಬಂದದ್ದು ಬರಲಿ, ಮಾಡುವ ಕೆಲಸದಲ್ಲಿ ಶ್ರದ್ಧೆ ಇರಲಿ. ಶುದ್ಧ ಚಿತ್ತದಿಂದ ಮುನ್ನಡೆಯಿರಿ. ಶೈಕ್ಷಣಿಕ ವಿಷಯದಲ್ಲಿ ಮುತುವರ್ಜಿ ಅಗತ್ಯ.

ಶುಭ: 3, 16, 19

ಅಶುಭ: 12, 21, 23

## ಮಿಥುನ




ದಾನಮಾಡಿದ ಪರಿಣಾಮಗಳನ್ನು ಎದುರಿಸುತ್ತಿರುವಿರಿ. ಫಲಿತಾಂಶಕ್ಕಾಗಿ ಹಾತೊರೆಯದೇ ನಿಮ್ಮ ಕೆಲಸಗಳಲ್ಲಿ ನಿರತರಾಗಿ. ಬದುಕಿನ ಪಥದ ಆಯ್ಕೆಯಲ್ಲಿ ಇಂದು ಎಡವಿದರೆ ಮುಂದೆ ಪಶ್ಚಾತ್ತಾಪ ಪಡುವಿರಿ.

ಶುಭ: 1, 12, 11

ಅಶುಭ: 6, 8, 18

## ಕರ್ಕಾಟಕ




ಫಲಾಫಲಗಳ ಬಗ್ಗೆ ಚಿಂತಿಸಬೇಡಿ. ಮನಸ್ಸು ಹೇಳುವ ಕೆಲಸವನ್ನೇ ಮಾಡಿ. ಕರ್ತವ್ಯ ಪೂರ್ಣಗೊಳಿಸಲು ಇದು ಸಕಾಲ. ಹೆಚ್ಚಿನದನ್ನು ಬಯಸದೇ ಇರುವ ಸಂಪತ್ತನ್ನು ರಕ್ಷಿಸಿಕೊಂಡು ಹೋಗುವುದೇ ನಿಮ್ಮ ದೊಡ್ಡ ಸವಾಲು.

ಶುಭ: 4, 8, 12

ಅಶುಭ: 14, 9, 20

## ಸಿಂಹ



ನಿಮ್ಮ ಕಾರ್ಯಕ್ಷಮತೆಯೇ ಕುಂದಿತೇನೊ ಎಂಬಂತೆ ಎಲ್ಲ ಕೆಲಸಗಳಲ್ಲಿ ತಪ್ಪು ಕಂಡುಬರುತ್ತಿವೆ. ಅದನ್ನು ಸರಿಪಡಿಸುವ ಹೊಣೆಯನ್ನು ನೀವೇ ವಹಿಸಿಕೊಳ್ಳಿ. ಶುಭ ಸಮಯ ಶೀಘ್ರದಲ್ಲಿದೆ, ಚಿಂತಿಸಬೇಡಿ.

ಶುಭ: 5, 20, 10

ಅಶುಭ: 4, 12, 13, 24

## ಕನ್ಯಾ



ಆಪತ್ತಿಗಾದೀತೆಂದು ಭಾವಿಸಿದ್ದು ನಿಮ್ಮ ಸಹಾಯಕ್ಕೆ ಬಾರದೇ ಹೋಗಬಹುದು. ಅಹಂಕಾರ ಕಳೆದಾಗ ಉಂಟಾಗುವ ಮನೋವ್ಯಥೆ ಮತ್ತು ಮನಃಶಾಂತಿಯನ್ನು ಅನುಭವಿಸುವಿರಿ. ನಿರ್ಮಲ ಹೃದಯದಿಂದ ಕೆಲಸ ಮಾಡಿ.

ಶುಭ : 7, 13, 21

ಅಶುಭ : 6, 14, 19